- ಆ ಥರದ ಸಿದ್ಧಾಂತಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೊರಟಾಗ ಅದಕ್ಕೆ ಅನುಗುಣವಾಗಿಯೇ ನಾವು ಬರೆದುಕೊಂಡು ಹೋಗುತ್ತೇವೆ. ಆಗ ನಮ್ಮ ಸಿದ್ಧಾಂತಕ್ಕೆ ನಮ್ಮ ಶೋಧನೆಗಳನ್ನು ಹೊಂದಿಸುತ್ತಾ ಹೋಗುತ್ತೇವೆ.

ನಮ್ಮಲ್ಲಿ ಹಿಂದೆ ಸಂಶೋಧನೆ, ವಿದ್ವತ್ ಕ್ಷೇತ್ರಗಳು ಬರೀ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿದ್ದವು ಎನ್ನುವ ಅಪವಾದ ಎಷ್ಟರಮಟ್ಟಿಗೆ ಸರಿ ಎಂದೂ ಯೋಚಿಸಬೇಕು. ಹಿಂದೆ ಹಾಗಿತ್ತು ಎಂದು ಬರೆಯುವವರಿಗೆ ಹಾಗಿರಲಿಲ್ಲ ಎಂದು ನಾನು ತೋರಿಸಿದರೆ ಒಪ್ಪಲಿಕ್ಕೆ ಸಿದ್ಧರಿದ್ದಾರಾ? ಕೆಂಪೇಗೌಡನದೇ ಒಂದು ಶಾಸನದಲ್ಲಿ 'ವೀರೇಶ' ಎಂಬ ಒಬ್ಬ ತುರೀಯ ಜಾತಿಯವನು ತನ್ನ ಶಾಸ್ತ್ರಪಾಂಡಿತ್ಯದಿಂದ ಕೆಂಪೇಗೌಡನನ್ನು ಮೆಚ್ಚಿಸಿ ಬಹುಮಾನ ಪಡೆದ ಎಂಬ ಉಲ್ಲೇಖ ಇದೆ. ಈ ಥರದ ಉದಾಹರಣೆಗಳು ನಮ್ಮಲ್ಲಿ ಎಷ್ಟೋ ಸಿಗುತ್ತವೆ. ಈ ಕುರಿತು ಯಾಕೆ ಯಾರೂ ಗಮನಹರಿಸುವುದಿಲ್ಲ?

ಹಿಂದಿನ ಕಾಲದಲ್ಲಿ ಸ್ತ್ರೀಯರಿಗೆ ಶೋಷಣೆ ಮಾಡುತ್ತಿದ್ದರು. ಹಾಗಾಗಿ ಅವರಿಗೆ ಕಾವ್ಯ ಬರೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ವಾದ ಮಾಡುತ್ತಾರೆ. ಹಾಗಾದರೆ ಹಿಂದಿನ ಜನಸಂಖ್ಯೆ ಎಷ್ಟು? 50 ಲಕ್ಷ ಜನ ಇದ್ದರು ಎಂದಿಟ್ಟುಕೊಳ್ಳೋಣ. ಅದರಲ್ಲಿ 25 ಲಕ್ಷ ಸ್ತ್ರೀಯರು ಇದ್ದರು ಎಂದಿಟ್ಟುಕೊಳ್ಳೋಣ. ಅವರಲ್ಲಿ ನೂರು ಜನ ಕವಯಿತ್ರಿಯರಿದ್ದರು, ಮಿಕ್ಕವರೆಲ್ಲ ಸಾಮಾನ್ಯರು ಎಂದಿಟ್ಟುಕೊಳ್ಳೋಣ. ಸಾಮಾನ್ಯ ಸ್ತ್ರೀಯರಿಗೆ ಕಿರುಕುಳ ಕೊಟ್ಟಿದ್ದಕ್ಕೆ ಕಾವ್ಯ ಬರೆದಿಲ್ಲ ಎಂದು ಸಿದ್ಧಾಂತ ಹೊರಡಿಸಬಹುದೇ? ಹಾಗಾದರೆ ಈಗಲೂ ಅದೇ ಪರಿಸ್ಥಿತಿ ಇದೆಯೇ? ಈಗ ಎಷ್ಟು ಜನ ಕವಯಿತ್ರಿಯರಿದ್ದಾರೆ? ನಮ್ಮ ಸಂಶೋಧನಾ ಕ್ಷೇತ್ರದಲ್ಲಿ ಈ ರೀತಿ ಮನೋಧರ್ಮ ಬಂದಿರುವುದು ನಿಜಕ್ಕೂ ದುರಂತ.

ಜಾತಿ, ಧರ್ಮ ಯಾವುದಕ್ಕೂ ಸಂಶೋಧನೆಯನ್ನು ತಳಕು ಹಾಕಬಾರದು. ಸಂಶೋಧನೆ ಮಾಡುವವನು ಮುಕ್ತವಾಗಿ ಮಾತಾಡಬೇಕು, ಮುಕ್ತವಾಗಿ ಬರೆಯಬೇಕು. ಯಾವುದೇ ರೀತಿ ಪೂರ್ವಗ್ರಹಗಳಿಗೆ ಒಳಗಾಗಬಾರದು.

